ರಾಜ್ಯದಲ್ಲಿ ಹಿಂದಿ ಶಿಕ್ಷಣ ಕಡ್ಡಾಯ ರದ್ದು ಮಾಡುವುದು

1750 (2104) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಹಿಂದಿ ಶಿಕ್ಷಣ ಕಡ್ಡಾಯ ಮಾಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಹಿಂದಿಪಾಠ ಮಾಡುವ ಶಿಕ್ಷಕರು ಎಲ್ಲಾ ಶಾಲೆಗಳಲ್ಲೂ ಇರುತ್ತಾರೆಯೇ?

ಇ) ಹಿಂದಿ ಶಿಕ್ಷಕರ ಕೊರತೆ ಗಣನೀಯವಾಗಿದ್ದರೂ ಸರ್ಕಾರ ಹಿಂದಿ ಕಡ್ಡಾಯ ಮಾಡಲು ಕಾರಣವೇನು?

ಈ) ಕಡ್ಡಾಯ ಮಾಡಿದ್ದರೆ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುವುದೇ?

ಪ್ರೋ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು)

ಅ) ಇಲ್ಲ

ಆ) ಇಲ್ಲ

ಇ) ಹಿಂದಿ ಭಾಷೆಯನ್ನು ಕಡ್ಡಾಯ ಮಾಡಿರುವುದಿಲ್ಲ. ಆದಾಗ್ಯೂ ಹಿಂದಿ ಭಾಷೆಯನ್ನು ಒಂದನೇ ಮತ್ತು ಮೂರನೇ ಭಾಷೆಯಾಗಿ ಇತರೆ 8 ಭಾಷೆಗಳೊಂದಿಗೆ ಭೋಧಿಸಲು ಅವಕಾಶ ಮಾಡಲಾಗಿದೆ. ಹೆಚ್ಚಿನ ಕನ್ನಡ ಮಾಧ್ಯಮ ವಿದ್ಯಾರ್ಥಿಗಳು ಹಿಂದಿಯನ್ನು 3ನೇ ಭಾಷೆಯನ್ನಾಗಿ ಓದಲು ಅಪೇಕ್ಷಿಸುತ್ತಾರೆ.

ಈ) ಕಡ್ಡಾಯ ಮಾಡಿಲ್ಲವಾಗಿ ತಕ್ಷಣ ನೇಮಕ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗಾಗಿ ಮಂಜೂರಾದ ಹಿಂದಿ ಶಿಕ್ಷಕರ ಹುದ್ದೆಗಳು ಖಾಲಿಯಾದಾಗ ಪ್ರತಿ ಬಾರಿಯೂ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಭರ್ತಿ ಮಾಡಲಾಗುತ್ತಿದೆ.

ಅದರಂತೆ 2001-02ನೇ ಸಾಲಿನ ನೇಮಕಾತಿಯಲ್ಲಿ ನಡೆದ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲೂ ಖಾಲಿ ಇದ್ದ 1459 ಹಿಂದಿ ಶಿಕ್ಷಕರನ್ನು ಪ್ರಕಟಿಸಿ 1045 ಅರ್ಹ ಹಿಂದಿ ಶಿಕ್ಷಕರನ್ನು ಆಯ್ಕೆ ಮಾಡಲಾಗಿದೆ.

ಇದರಿಂದಾಗಿ ಹಿಂದಿ ಶಿಕ್ಷಕರ ಕೊರತೆಯನ್ನು ಆದಷ್ಟೂ ಪರಿಹರಿಸಿದ್ದು ಉಳಿದಂತೆ ಕೊರತೆಯಿಂದ ಶಾಲೆಗಳಲ್ಲಿ ಹಿಂದಿ ಬಲ್ಲ ಸಹಶಿಕ್ಷಕರಿಂದ ಹಿಂದಿ ಭೋದನೆಗೆ ಏರ್ಪಾಡು ಮಾಡಿ ಹಿಂದಿ ಭೋಧನೆಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗಿದೆ.

ಬಿ.ಇಡ್ ಪದವಿಧರರಿಗೆ ಉದ್ಯೋಗ ನೇಮಕಾತಿಗೆ ಇರುವ ಆಯ್ಕೆಯ ಮಾನದಂಡ

1752 (2106) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿ.ಇಡ್ ಪದವೀಧರರಿಗೆ ಉದ್ಯೋಗ ನೇಮಕಾತಿಗಾಗಿ ಇರುವ ಆಯ್ಕೆಯ ಮಾನದಂಡಗಳೇನು;

ಆ) ಸದರಿ ಹುದ್ದೆಗಳ ಭರ್ತಿಗಾಗಿ 2 ಸಾವಿರ ಪ್ರೌಢಶಾಲಾ ಸಹ ಶಿಕ್ಷಕರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದು ನಿಜವೇ;

ಇ) ಆಯ್ಕೆ ಪಟ್ಟಿ ಪ್ರಕ್ರಿಯೆ ಯಾವ ಹಂತದಲ್ಲಿದೆ; ಈ ಪಟ್ಟಿಯನ್ನು ರದ್ದುಗೊಳಿಸಲು ಸರ್ಕಾರ ಆದೇಶಿಸಿದೆಯೇ ರದ್ದುಗೊಳಿಸಲು ಕಾರಣವೇನು;

ಈ) ಈಗ ಅನುಸರಿಸಿದ ನಿಯಮದ ಬದಲಿಗೆ ಸಾಮಾನ್ಯ (ಸಿಇಟಿ) ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ ಮಾಡುವ ವಿಚಾರದ ಬಗ್ಗೆ ಸರ್ಕಾರದ ನಿಲುವೇನು?

ಪ್ರೋ।। ಬಿ.ಕೆ. ಚಂದ್ರಶೇಖರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಅಭ್ಯರ್ಥಿಗಳು ಪದವಿ ಹಾಗೂ ಬಿ.ಇಡಿಯು ಪಡೆದ ಗರಿಷ್ಠ ಸರಾಸರಿ ಅಂಕಗಳ ಆರ್ಹತೆ ಆಧಾರದ ಮೇಲೆ ಹಾಗೂ ಮೀಸಲಾತಿ ನಿಯಮಗಳ ಅನ್ವಯ ಆಯ್ಕೆ ಮಾಡಲಾಗುವುದು.

ಆ) ಹೌದು

ಇ) ಈಗಾಗಲೇ ಆಯ್ಕೆ ಪಟ್ಟಿ ಪ್ರಕಟಿಸಿದ್ದು ಆಯ್ಕೆಯಾದ ಹಾಗೂ ಮೂಲ ದಾಖಲೆಗಳನ್ನು ಪರಿಶೀಲನೆಗೆ ಒಪ್ಪಿಸಿದ 870 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ ಹಾಗೂ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಆದ್ದರಿಂದ ಆಯ್ಕೆ ಪಟ್ಟಿ ರದ್ದುಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಹೌದು. 2002-03ನೇ ಸಾಲಿನ ನೇಮಕಾತಿಯನ್ನು ಸಿ.ಇ.ಟಿ. ಪ್ರವೇಶ ಪರೀಕ್ಷೆ ಮೂಲಕ ಮಾಡಲು ತೀರ್ಮಾನಿಸಲಾಗಿದೆ.

ಆರೋಗ್ಯ ಇಲಾಖೆಯ ಜಾಹೀರಾತು ಫಲಕಗಳ ಗುತ್ತಿಗೆ ಪ್ರಕರಣ

1753 (2107) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಲಾಖೆಯ ಗಮನಕ್ಕೂ ತಾರದೆ, ಸರ್ಕಾರದ ಪೂರ್ವಾನುಮತಿ ಪಡೆಯದೆ ಜಾಹೀರಾತು ಫಲಕ ಹಾಕಲು ಆರೋಗ್ಯಾಧಿಕಾರಿಗಳು ಶಾಮೀಲಾಗಿರುವ ಪ್ರಕರಣ ಬೆಂಗಳೂರು ನಗರದಲ್ಲಿ ಕಂಡು ಬಂದಿದೆಯೇ;

ಆ) ಇಂತಹ ಹಗರಣಗಳ ಸೃಷ್ಟಿಕರ್ತರು ಯಾರು ಯಾವ ಸ್ಥಳದಲ್ಲಿ ಈ ಜಾಹೀರಾತು ಪ್ರದರ್ಶಿಸಲು ಅವಕಾಶ ನೀಡಲಾಗಿದೆ;

ಇ) ಈ ಘಟನೆ ಇಲಾಖೆಯ ಗಮನಕ್ಕೆ ಬಂದಿದೆಯೇ; ಎಷ್ಟು ವರ್ಷಗಳಿಂದ ಈ ಅವ್ಯವಹಾರ ನಡೆದಿದೆ; ಇದರಿಂದಾಗಿ ಸರ್ಕಾರಕ್ಕಾಗಿರುವ ನಷ್ಟವೆಷ್ಟು;

ಈ) ಜಾಹೀರಾತು ಫಲಕ ಪ್ರದರ್ಶಿಸಲು ಜಾರಿಯಲ್ಲಿರುವ ನಿಯಮಗಳೇನು; ಇದನ್ನು ಉಲ್ಲಂಘಿಸಿರುವ ಅಧಿಕಾರಿಗಳ ಮೇಲೆ ಯಾವ ಉಗ್ರ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು);

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆ) ಬೆಂಗಳೂರು ನಗರ ಕೋನೇನ ಅಗ್ರಹಾರದ ಪ್ರಾ.ಆ. ಘಟಕದ ಹಿಂದಿನ ವೈದ್ಯಾಧಿಕಾರಿಗಳಾಗಿದ್ದ ಡಾ।। ಸುಭಾಷ್‌ಚಂದ್ರ ರೆಡ್ಡಿ (ಈಗಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಬೆಂಗಳೂರು ಗ್ರಾ. ಜಿಲ್ಲೆ) ಡಾ।। ಶಿವಳ್ಳಿ, ಹಿಂದಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಬೆಂಗಳೂರು (ನಗರ) ಜಿಲ್ಲೆ, ಹಾಲಿ ಉಪನಿರ್ದೇಶಕರು (ಕ್ಷಯ)